ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 21/2021**
**ಫ್ರಾಸಾ- 10 ಚಾಸಾ- 8**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ವಸಂತ್ |
| ತಂದೆಯ ಹೆಸರುಃ | : | ನಿಂಗೇಗೌಡ |
| ವಯಸ್ಸುಃ | : | 60 ವರ್ಷ |
| ಉದ್ಯೋಗಃ | : | ಗಾರೆಕೆಲಸ |
| ವಾಸ | : | ನರಸೀಪುರ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:27-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ ದಾಖಲೆ ನಿಪಿ-5ರಲ್ಲಿರುವ ರುಜು ನನ್ನದೆ. ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. 4-5 ವರ್ಷಗಳ ಹಿಂದೆ ಹಳೇಬೀಡು ಪಿ ಎಸ್ ನಲ್ಲಿ ಈ ಸಹಿ ಹಾಕಿರುತ್ತೇನೆ. ಚಾಸಾ-6ರವರು ಅವರ ಮಗನಿಗೆ ಸಂಬಂಧಪಟ್ಟ ಬಟ್ಟೆಯನ್ನು ಠಾಣೆಯಲ್ಲಿ ಹಾಜರುಪಡಿಸಿದರು. ಅದು ಒಂದು ಪ್ಯಾಂಟು ಶರ್ಟ್ ಆಗಿತ್ತು. ಅದು ಸುಟ್ಟುಹೋಗಿತ್ತು. ಅದನ್ನು ನೋಡಿದರೆ ಗುರುತಿಸುತ್ತೇನೆ. ಅವು ನ್ಯಾಯಾಲಯದ ಮುಂದಿರುವ ಎಂ.ಒ.4 ಮತ್ತು 5 ಆಗಿರುತ್ತವೆ ಅವುಗಳನ್ನು ವಶಪಡಿಸಿಕೊಂಡು ಪೊಲೀಸರು ಮಾಡಿದ ಮಹಜರಿಗೆ ಸಹಿ ಹಾಕಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿಕೆ ವಕೀಲರಿಂದಃ**

ನಾನು, ಚಾಸಾ-1, 6 ಮತ್ತು 9 ರವರು ಒಂದೇ ಊರಿನವರು ಎಂದರೆ ನಿಜ. ಮಹಜರಿಗೆ ಬರಬೇಕೆಂದು ನನಗೆ ಚಂದ್ರಶೇಖರ್ ರವರು ಕರೆದಿಲ್ಲ, ಪೊಲೀಸರು ಕರೆದಿರುತ್ತಾರೆ. ಪೊಲೀಸರು ನನಗೆ ನೋಟೀಸು ಕೊಟ್ಟಿಲ್ಲ. ನನ್ನ ಜೊತೆ ಯಾರು ಯಾರು ಇದ್ದರೆಂದರೆ ಸಾಕ್ಷಿಯು ಸುಮಾರು ಜನ ಇದ್ದರು, ಠಾಣೆಗೆ ಹೋದೆವು, ಅಲ್ಲಿಗೆ ಚಾಸಾ-6ರವರು ಬಟ್ಟೆಯನ್ನು ಹಿಡಿದುಕೊಂಡು ಬಂದಿದ್ದರು, ಅಲ್ಲಿ ಸುಮಾರು

25-30 ಜನ ಇದ್ದರು ಎನ್ನುತ್ತಾರೆ. ಬಟ್ಟೆಯನ್ನು ಚಾಸಾ-6ರವರು ತಂದಿದ್ದರು. ಬೆಂಕಿಹಚ್ಚಿದ ಜಾಗದಿಂದ ತಂದರು, ಎಲ್ಲಿಂದ ಎಂದು ಗೊತ್ತಿಲ್ಲ. ಮಹಜರಲ್ಲಿ ಏನು ಬರೆದಿದೆ ಎಂದು ನನಗೆಗೊತ್ತಿಲ್ಲ ಎಂದರೆ ಸರಿ. ಮಹಜರನ್ನು ಯಾರು ಬರೆದರೆನ್ನುವುದದು ನನಗೆ ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರಿನಡಿ ಏನೇನು ವಶಪಡಿಸಿಕೊಂಡರೆನ್ನುವುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಡಬ್ಬಗಳು, ಬಟ್ಟೆಗಳನ್ನು ನೋಡಿರುತ್ತೇನೆ ಎನ್ನುತ್ತಾರೆ.ಈ ಬಟ್ಟೆಯನ್ನು ಇದೇ ಮೊದಲ ಬಾರಿಗೆನೋಡುತ್ತಿರುವುದು ಎಂದರೆ ಸಾಕ್ಷಿಯು ಆವತ್ತೂ ನೋಡಿದ್ದೇನೆ ಎನ್ನುತ್ತಾರೆ. ಮಹಜರನ್ನು ಯಾವತ್ತು ಮಾಡಿರುವುದೆಂದು ಗೊತ್ತಿಲ್ಲ ಎಂದರೆ ನನಗೆ ವಿದ್ಯಾಭ್ಯಾಸ ಇಲ್ಲ ಎನ್ನುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**